**ದಿನಾಂಕಃ10.11.2021 ರಂದು ಸಾಕ್ಷಿದಾರರು ಹಾಜರಿದ್ದು, ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ–**

ಸದರಿ ಆಭರಣಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಭಾವಚಿತ್ರದಲ್ಲಿರುವ ಆಭರಣಗಳ ಚಿತ್ರಗಳನ್ನು ನೋಡಿ ಗುರುತಿಸುತ್ತಾರೆ. ಅದನ್ನು **ನಿಪಿ–4** ಎಂದು ಗುರುತಿಸಲಾಯಿತು. ನಾನು 4 ಬಂಗಾರದ ಆಭರಣಗಳನ್ನು ಪೊಲೀಸ್‌ರಿಂದ ನಿಪಿ–4 ರಂತೆ ಪಡೆದುಕೊಂಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿ ಸದರಿ ದಾಖಲೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಭದ್ರತಾ ಮುಚ್ಚಳಿಕೆಯಾಗಿರುತ್ತದೆ. ಅದನ್ನು **ನಿಪಿ–5** ಎಂದು, ಸಾಕ್ಷಿಯ ಸಹಿಯನ್ನು **ನಿಪಿ–5(ಎ)** ಎಂದು ಗುರುತಿಸಲಾಯಿತು. ಸದರಿ ನಿಪಿ–5 ನ್ನು ನಿಪಿ–4 ರಲ್ಲಿರುವ ಆಭರಣಗಳನ್ನು ತನಿಖಾಧಿಕಾರಿಯಿಂದ ಪಡೆಯುವಾಗ ಬರೆದುಕೊಟ್ಟಿರುತ್ತೇನೆ. ನಾನು ಪೊಲೀಸ್‌ರು ನಮ್ಮ ಮನೆಗೆ ಕರೆದುಕೊಂಡು ಬಂದ ಆಸಾಮಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತನನ್ನು ನೋಡಿ ಗುರುತಿಸುತ್ತಾರೆ.

**ಪಾಟೀ–ಸವಾಲುಃ ಆರೋಪಿ ಪರ ಶ್ರೀ ಸಿ.ಕೆ. ವಕೀಲರು ಈ ಪ್ರಕರಣದಿಂದ ನಿವೃತ್ತಿ ಹೊಂದಿರುವುದಾಗಿ ತಿಳಿಸಿರುತ್ತಾರೆ.**

**ಆರೋಪಿಗೆ ಪಾಟೀ–ಸವಾಲು ಮಾಡಲು ತಿಳಿಸಲಾಗಿ, ಆರೋಪಿಯು ತನಗೆ ತಾಲೂಕು ಕಾನೂನು ಸೇವಾ ಸಮಿತಿಯಿಂದ ವಕೀಲರನ್ನು ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತಾನೆ.**

**ನ್ಯಾಯದಾನದ ದೃಷ್ಠಿಯಿಂದ ಪಾಟೀ–ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನ ಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.